ಶ್ರೀ ಬಿ ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಎಂ.ವಿ. ವೆಂಕಟಪ್ಪನವರು ಎತ್ತಿರತಕ್ಕ ಪ್ರಶ್ನೆ ಏನಿದೆ, ಇದನ್ನು ಬಹಳ ವರ್ಷಗಳಿಂದ ಕೇಳುತ್ತಲೇ ಬಂದಿದ್ದೇವೆ. ಸರ್ಕಾರದಲ್ಲಿ ಸಂಬಂಧಪಟ್ಟ ಮಂತ್ರಿಗಳಾಗಿರುವವರು ಮಾತ್ರ, ಈ ಉತ್ತರದ ಪ್ರತಿಗಳಿಗೆ ರುಜು ಹಾಕಬೇಕೇ ಹೊರತು, ಅಂಡರ್ ಸೆಕ್ರಟರಿಗಳಾಗಲೀ, ಅಥವಾ ಡೆಪ್ಯೂಟಿ ಸೆಕ್ರಟರಿಗಳಾಗಲೀ ರುಜು ಹಾಕಬಾರದು. ಏಕೆಂದರೆ, ಮಂತ್ರಿಗಳು ವಿಧಾನ ಸಭೆಗೆ ಉತ್ತರ ಕೊಡುತ್ತಾರೆ. ಆದ್ದರಿಂದ ಇನ್ನು ಮೇಲೆ ಸರ್ಕಾರದ ಮಂತ್ರಿಗಳು ಮಾತ್ರ ಉತ್ತರ ಪಟ್ಟಿಗಳಿಗೆ ಸಹಿ ಹಾಕಬೇಕು. ಇದನ್ನು ಸರ್ಕಾರದ ವತಿಯಿಂದ ಹೇಳುತ್ತಿದ್ದೇನೆ.

ಅಧ್ಯಕ್ಷರು.—Thank you very much. ಈಗ ಗಮನ ಸೆಳೆಯುವ ಸೂಚನೆಗಳು, ಮೊದಲನೆಯದು ಶ್ರೀ ಎಂ. ಶಂಕರರೆಡ್ಡಿಯವರದು, ಇದನ್ನು ಇನ್ನೊಂದು ದಿವಸ ತೆಗೆದುಕೊಳ್ಳೋಣ. ಇದರ ಜೊತೆಗೆ, ಇನ್ನೂ ಎರಡು ಗಮನ ಸೆಳೆಯುವ ಸೂಚನೆಗಳು ಇವೆ, ಇವು ಮುಂಗಿಯುವುದರೊಳಗಾಗಿ, ಮಾನ್ಯ ಮುಖ್ಯಮಂತ್ರಿಗಳು ಬಂದರೆ, ಅದನ್ನೂ ತೆಗೆದುಕೊಳ್ಳೋಣ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಗಮನ ಸೆಳೆಯುವ ಸೂಚನೆಗೆ, ಮಾನ್ಯ ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಇರುವುದರಿಂದ, ಈಗ ಮೂರನೆಯ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣ. ಆನಂತರ ನಿಮ್ಮದನ್ನು ತೆಗೆದುಕೊಳ್ಳೋಣ. ಈಗ ಮಾನ್ಯ ಡಿ. ಬಿ. ಚಂದ್ರೇಗೌಡರು ಮಾನ್ಯ ಮಂತ್ರಿಗಳ ಗಮನ ಸೆಳೆಯಿರಿ.

## ಗಮನ ಸೆಳೆಯುವ ಸೂಚನೆಗಳು

### ೧) ಕರ್ನಾಟಕ ಹಾಲು ಉತ್ಪಾದಕ ಮಹಾಮಂಡಳಿಯಲ್ಲಿನ ಸಾಮೂಹಿಕ ವರ್ಗಾವಣೆ

ಶ್ರೀ ಡಿ. ಬಿ. ಚಂದ್ರೇಗೌಡ.—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ಹಾಲು ಉತ್ಪಾದಕ ಮಹಾ ಮಂಡಳಿಯಲ್ಲಿನ ಸಾಮೂಹಿಕ ವರ್ಗಾವಣೆಯ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಶುಸಂಗೋಪನಾ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಹೇಳಿಕೆ ಇಂಗ್ಲಿಷ್‌ನಲ್ಲಿದೆ. ತರ್ಜುಮೆ ಮಾಡಿಲ್ಲ. ಕ್ಷಮಿಸಬೇಕು. ಅದನ್ನು ಓದುತ್ತೇನೆ.....

ಶ್ರೀ ವಾಟಾಳ್ ನಾಗರಾಜ್.—ದಯವಾಡಿ ಕನ್ನಡದಲ್ಲಿ ಹೇಳಿ, ಇಂಗ್ಲೀಷಿನಲ್ಲಿರುವುದನ್ನೇ ಕನ್ನಡದಲ್ಲಿ ಹೇಳಿ. ಮತ್ತೆ ಮತ್ತೆ ಈ ಚಾಳಿ ಬೇಡ. ಇದು ಖಂಡಿತ ಆಗುವುದಿಲ್ಲ.

MR. SPEAKER.—I cannot force anybody to speak in a particular language.

ಶ್ರೀ ಬಿ. ಬಸವಲಿಂಗಪ್ಪ.—(ಗ್ರಾಮಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ಪಶುಸಂಗೋಪನಾ ಮಂತ್ರಿಗಳು).—ಇವತ್ತು ಒಂದು ದಿವಸ ಕನ್ನಡದಲ್ಲಿ ಹೇಳುವುದಕ್ಕಾಗುವುದಿಲ್ಲ. ಇದು ಇಂಗ್ಲೀಷಿನಲ್ಲಿರುವುದರಿಂದ ಇಂಗ್ಲೀಷಿನಲ್ಲಿಯೇ ಹೇಳುತ್ತೇನೆ.

The Government of Karnataka has contributed share capital of Rs. 6.00 crores (Rupees Six Crores) in Karnataka Dairy Development Corporation and Rs. 2.01 crores (Two crores one Lakh) in Karnataka Milk Products Ltd The total amount of Rs. 8.00 crores (eight crores) has been ordered for transfer to Karnataka Milk Federation. Thus, as against Rs. 10.00 crores (Rupees Ten Crores) of equity capital of Karnataka Milk Federation, Rs. 8.00 crores are held by the Government of Karnataka and Rs. 13.22 lakhs are held by the District Milk Unions. In addition, the Government of India has paid towards the equity of Rs. 2.99 crores for which shares to the extent of Rs. 2.64 crores are to be issued by the Karnataka Milk Federation.

2. The Government of Karnataka has also stood guarantee for loans aggregating Rs. 55.76 crores sanctioned by the National Dairy Development Board under both world Bank Project and the Operation Flood Projects.

3. The Government of Karnataka vide their letter No. AHFF/DS/AHF/35/90, Dated 17-3-90 requested the Managing Director, Karnataka Milk Federation to effect the transfers of all the Managing Directors of the District Milk Unions in the State to be effective from 1-4-1990 in the interest of public service and to achieve better results.

† ಶ್ರೀ ಡಿ. ಬಿ. ಚಂದ್ರೇಗೌಡ.—ಸನ್ಮಾನ್ಯ ಅಧ್ಯಕ್ಷರೇ, ಇದೊಂದು ವಿಚಿತ್ರವಾದ ಸ್ಥಿತಿ. ಮಿಲ್ಕ್ ಫೆಡರೇಷನ್ ಒಂದು ಸ್ವಾಯತ್ತ ಸಂಸ್ಥೆ. ಅದು ಸ್ವಾಯತ್ತ ಸಂಸ್ಥೆ ಎಂಬುದನ್ನು ಮಂತ್ರಿಗಳೆ ಒಪ್ಪಿಕೊಳ್ಳುತ್ತಾರೆ ಎಂದು ನಾನು ಭಾವನೆ ಮಾಡುತ್ತೇನೆ. ಇಂತಹ ಒಂದು ಸ್ವಾಯತ್ತ ಸಂಸ್ಥೆಯ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಸರಕಾರದ ಹಸ್ತಕ್ಷೇಪ ಸಲ್ಲದು ಎನ್ನುವುದು ಸಾಮಾನ್ಯ ವಿಚಾರ. ಆದರೆ ಅದನ್ನು ಅಷ್ಟೇ ಸಾಮಾನ್ಯವಾಗಿ ಈ ಸದನದಲ್ಲಿ ನಾನು ಹೇಳಿಬಿಟ್ಟರೆ ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳುವುದಿಲ್ಲ ಎಂದು ನನಗೆ ಗೊತ್ತು. ನಾನು ಮಾನ್ಯ ಮಂತ್ರಿಗಳಲ್ಲಿ ಕೆಲವು ವಿವರಗಳನ್ನು ಕೇಳುವುದಕ್ಕೆ ಬಯಸುತ್ತೇನೆ. ಸರಕಾರಕ್ಕೆ ನೇರವಾದ ಆಡಳಿತಾತ್ಮಕವಾದ ಕಂಟ್ರೋಲ್ ಎಂದು ಏನು ಪೇಳುತ್ತೇವೆ. ಅದು ಈ ಮಿಲ್ಕ್ ಫೆಡರೇಷನ್ ಆಟಾನಮಸ್ ಆದುದರಿಂದ ಇಲ್ಲ. ಹಾಗೆ ಇಲ್ಲ ಎಂದು ಆದರೆ ಸರಕಾರಕ್ಕೂ, ನ್ಯಾಷನಲ್ ಡೈರಿ ಡೆವಲಪ್‌ಮೆಂಟ್ ಬೋರ್ಡ್‌ಗೂ ಆಗಿರತಕ್ಕಂಥ ಒಂದು ವ್ಯವಸ್ಥೆಬಗ್ಗೆ ಸರಕಾರದ ಆಜ್ಞೆ ಇದೆ. ಅದನ್ನು ಬೇಕಾದರೆ ನಾನು ಕೊಡುತ್ತೇನೆ. ಅದರಲ್ಲಿ In accordance with that the Government is committed not to interfere with the administration or functioning of the Milk Federation or Milk Unions The third thing is, before posting MDs to the Unions they have to, consult either the Union Board or the President concerned and then only they are empowered to post. And the most important aspect of the matter is though the Government had powers earlier, that has been withdrawn for two reasons. One is, this organisation is registered under the Co-operative Act and an autonomous organisation. Number two: Government handed over these dairies to the concerned Unions by declaring autonomy, taking the benefit of reimbursing the loss and also declaring would that it not interefere with the management of the Milk Unions. ನಿಮ್ಮ ಜವಾಬ್ದಾರಿ ಇಲ್ಲ. ಲಂಕ್ಷ್ಯಾನಾದರೆ ನಿಮ್ಮ ಜವಾಬ್ದಾರಿ ಇಲ್ಲ ಎನ್ನುವ ಕಾರಣಕ್ಕಾಗಿ ಇದನ್ನು ಹೇಳಿದೆ. ಹಾಗಿದ್ದರೆ ಆ ಅಧಿಕಾರ ಯಾರಿಗೆ ಎಂಬುದು ಪ್ರಶ್ನೆ. ಸಹಕಾರಿ ಕಾಯಿದೆ ಸೆಕ್ಷನ್ ೩೦ (ಬಿ) ಪ್ರಕಾರ ಆ ಅಧಿಕಾರ ರಿಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ ಸೊಸೈಟೀಸ್‌ಗೆ ಸ್ವಲ್ಪಮಟ್ಟಿಗೆ ಇದೆ. ಇದಕ್ಕೆ ಸಂಬಂಧಪಟ್ಟ ನೋಟಿಫಿಕೇಷನ್ ನಂಬರ್ ಆರ್‌ಡಿಸಿ ೨೧೧ ಸಿಪಿ ಲಳಿ/೨೪ ಅಕ್ಟೋಬರ್ ೧೯೪೪ ಆದನ್ನು ನೀವು ನೋಡಿ. None other than the Registrar under the law has the authority to transfer the concerned officers. Now mass transfers are effected in which all the MDs of the Unions are transferred by the Karnataka Milk Federation Managing Director, who in his order has referred the Government Order. ತಮ್ಮಿಂದ ಆದೇಶ ಹೋಗಿದೆ. ೦೭.೩.೧೯೦ ರಲ್ಲಿ ಸರಕಾರದ ಆಜ್ಞೆ ಯಾಗಿದೆ. Transfer of Managing Directors. The Deputy Secretary signs it.

> "With reference to the above, you are to effect the transfer of all Managing Directors of the District Milk Unions in the State to be effective from 1-4-1990 in the

interest of the public service and achieve better results.

Immediate action may be taken."

ಇದು ಅಷ್ಟಕ್ಕೇ ನಿಲ್ಲುವುದಿಲ್ಲ. ಎಷ್ಟು ದೂರಕ್ಕೆ ಈ ಆಡಳಿತದಲ್ಲಿ ಸರಕಾರ ಹಸ್ತಕ್ಷೇಪ ಮಾಡಿದೆ ಎಂದರೆ ಇಂತಹವರನ್ನು ಇಂತಹ ಕಡೆಗೇ ಪೋಸ್ಟ್ ಮಾಡಬೇಕು, ಇಂತಹವರನ್ನು ಇಂತಹ ಕಡೆಯಿಂದ ತೆಗೆದು ಇವರನ್ನು ಹಾಕಿ ಎಂಬ ನಿರ್ದೇಶನ ಹೋಗಿದೆ

Thus I have not only reason to believe but I have evidence to believe that the Government has interfered with the administration of the Federation in contravention of the agreement and in contravention of the existing autonomity of the organisations. "Effect transfer to be given."

ಆದ್ದರಿಂದ ನನ್ನ ಮೂಲ ಪ್ರಶ್ನೆ ಏನೆಂದರೆ ಯಾವುದರಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಬಾರದು ಎಂದು ಸರ್ಕಾರ ಒಪ್ಪಿಕೊಂಡಿತ್ತೋ ಅದರ ವಿರುದ್ಧ ಬರೀ ಆಡಳಿತಾತ್ಮಕವಾದ ನಿಮ್ಮ ಹಸ್ತಕ್ಷೇಪ ಮಾತ್ರ ಅಲ್ಲ, ಅಲ್ಲಿ ನಿರ್ದೇಶನ ಕೊಟ್ಟು ಇಂತಹವರನ್ನೇ ಇಲ್ಲಿ ಹಾಕಬೇಕು ಎಂದು ಯಾವ ಅಧಿಕಾರ ವನ್ನು ಇಲ್ಲಿ ನೀವು ಚಲಾಯಿಸಿದ್ದೀರಿ ? ಹೀಗೆ ಅಧಿಕಾರ ಚಲಾಯಿಸುವಾಗ ಮಿಲ್ಕ್ ಯೂನಿಯನ್/ ಫೆಡರೇಷನ್‌ಗಳಿಗೆ ಇದ್ದಂತಹ ಸ್ವಾಯತ್ತತೆಯಲ್ಲಿ ಹಸ್ತಕ್ಷೇಪ ಮಾಡಿದಂತಾಗುವುದಿಲ್ಲವೇ ? ಇಂತಹ ಹಸ್ತಕ್ಷೇಪ ಮಾಡತಕ್ಕಂಥ ಅವಶ್ಯಕತೆ ಏನು ಇತ್ತು ? ಮತ್ತು ಆ ಅಧಿಕಾರ ಎಲ್ಲಿತ್ತು ?

ಶ್ರೀ ಪಿ. ಜಿ. ಆರ್. ಸಿಂಧ್ಯ.–ಮಾನ್ಯ ಅಧ್ಯಕ್ಷರೇ ಈ ಸರ್ಕಾರ ಬಂದ ಮೇಲೆ ಮುಕ್ತ ವಿಶೇಷವಾಗಿ ನಮ್ಮ ಮಾನ್ಯ ಸಚಿವರಾದ ಬಸವಲಿಂಗಪ್ಪನವರು ಈ ಗ್ರಾಮೀಣ ಅಭಿವೃದ್ಧಿ ಇಲಾಖೆಯನ್ನು ತೆಗೆದು ಕೊಂಡ ಮೇಲೆ ಈ ರೀತಿ ಅವರು ಮುಂದೆ ಏನು ಮಾಡುತ್ತಾರೆ ಏನನ್ನುವುದಕ್ಕೆ ಇದೊಂದು ಮುನ್ಸೂಚನೆ ಅಷ್ಟೇ. ಸಹಕಾರಿ ಕ್ಷೇತ್ರದಲ್ಲಿ ಸರ್ಕಾರ ಕೈ ಹಾಕಬಾರದು ಎಂದು ಹೇಳತಕ್ಕಂಥಾದ್ದಕ್ಕೆ ನಾವು ಎಲ್ಲರೂ ಒಪ್ಪತಕ್ಕಂತಹ ವಿಚಾರ ಆದರೂ ಸಹ ಒಪ್ಪಬಹುದು. ನಮ್ಮ ರಾಜ್ಯದಲ್ಲಿ ಹಾಲಿನ ಉತ್ಪಾದನೆ ಇರಬಹುದು, ಅಥವಾ ವಿತರಣೆ ಇರಬಹುದು ಬಹುಶಃ ಗುಜರಾತ್ ಬಿಟ್ಟರೆ ಈ ಕರ್ನಾಟಕ ಮಿಲ್ಕ್ ಫೆಡರೇಷನ್‌ನವರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಈ ಸಹಕಾರಿ ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಮಾಡಿರತಕ್ಕಂಥ ಅಧಿಕಾರಿಗಳಿಗೆ ನಾವು ಪ್ರೋತ್ಸಾಹ ಕೊಡಬೇಕಾಗುತ್ತದೆ ವಿಕಿಂದರೆ ಅವರು ಚುನಾಯಿತ ಪ್ರತಿನಿಧಿಗಳ ಜೊತೆಯಲ್ಲಿ ಕುಳಿತುಕೊಂಡು ಕೆಲಸವನ್ನು ಮಾಡಿರುತ್ತಾರೆ. ಆದರೆ ಅದಕ್ಕೆ ಬದಲಾಗಿ ಅವರಿಗೆ ಒಂದು ಭಯದ ವಾತಾವರಣ ನಿರ್ಮಾಣ ಮಾಡಬೇಕು ಪಾಳೆಗಾರಿಕೆ ಪ್ರವೃತ್ತಿ ದರ್ಪ ತೋರಿಸಬೇಕು ಎಂದು ಯಾವ ಅಧಿಕಾರಿಯನ್ನು ಎಲ್ಲಿ ಹಾಕಬೇಕು ಎಂದು ನಾನಾಗಲಿ ಅಥವಾ ನನ್ನ ನಾಯಕರಾಗಲಿ ಹೇಳುವುದಿಲ್ಲ. ಆದರೆ ನೀವು ನಿಮ್ಮ ದರ್ಪ ತೋರಿಸಬೇಕು ಎಂದು ಇಂಥಾ ಅಧಿಕಾರಿಯನ್ನು ಇಲ್ಲಿಗೇ ಹಾಕಬೇಕು ಎಂದು ಹೇಳಿ ಮಾಡಿ ತೋರಿಸುತ್ತಿದ್ದೀರಿ, ಇದರಿಂದ ಒಂದು ರೀತಿಯಲ್ಲಿ ವರ್ಗಾವಣೆ ಮಾಡಿರತಕ್ಕಂಥಾದ್ದರಲ್ಲಿ ಅವರಿಗೆ ಸಮಾಧಾನ ಮತ್ತು ಸಂತೋಷ ಸಿಗುತ್ತದೆ ಎಂದು ನನಗಂತೂ ಕಂಡುಬರುತ್ತದೆ. ಅವರು ಇವತ್ತು ಹೇಳಬಹುದು. ರಾಜ್ಯ ಸರ್ಕಾರ ಇದಕ್ಕೆ ಹಣ ಕೊಟ್ಟಿದೆ, ರಾಜ್ಯ ಸರ್ಕಾರದ ಮಂತ್ರಿಗಳು ೪ ಜನ ಅಧಿಕಾರಿಗಳನ್ನು ವರ್ಗ ಮಾಡುವುದು ಕೇಂದ್ರ ಸರ್ಕಾರದವರು ೨ ಕೋಟಿ ರೂಪಾಯಿಗಳು ಕೊಟ್ಟಿದ್ದಾರೆಂದು ತಾವು ಹೇಳಿದಿರಿ ಅದಕ್ಕೆ ಸಂಬಂಧ ಪಟ್ಟವರು ಅವರು ೮ ಜನ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದೇ ಆದರೆ ಈ ಮಿಲ್ಕ್ ಫೆಡರೇಷನ್ಸ್ ಹೇಗೆ ಉಳಿಯಲಿತ್ತು ? ದಯವಿಟ್ಟು ತಾವು ಇದಕ್ಕೆ ಉತ್ತರ ಕೊಡಬೇಕು. ನಾನು ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ತಾವು ಮುಂದೆ ಏನೇನು ಮಾಡುತ್ತೀರಿ ಎನ್ನುವುದಕ್ಕೆ ಇದು ಮುನ್ಸೂಚನೆ ಅಷ್ಟೇ: ತಮಗೆ ಎಲ್ಲಾ ನೇರವಾಗಿ ಆಡಳಿತವನ್ನು ಈ ಮಿಲ್ಕ್ ಫೆಡರೇಷನ್‌ಗಳಲ್ಲಿ ನಡೆಸುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ನಿಮ್ಮಲ್ಲಿ ನಾನೇ ದೊಡ್ಡವನು ಎಂದು ಹೇಳತಕ್ಕಂಥ ಪ್ರವೃತ್ತಿ ಏನಿದೆ ಆ ಪ್ರವೃತ್ತಿಯ ಸಂಕೇತವನ್ನು ತಾವು ಹಿರಿಯರು ಆದರೂ ನಾನು ಬಹಳ ನೋವಿನಿಂದ ಈ ಮಾತನ್ನು ಹೇಳಬೇಕಾದ ಪ್ರಸಂಗ ಉದ್ಭವವಾಗಿದೆ. ಅವರು ಈ ರೀತಿ ಮಾಡಿರುವುದರಿಂದ ಎಂದು ದಿವಸ ಅವರಿಗೆ ಸಮಾಧಾನ ಆಗುಬಹುದು. ಏನಪ್ಪ ಮಾಡುವುದು ವರ್ಗಾವಣೆ ಮಾಡಿಸ್ಬೇಕೆಂದು ಹೇಳಬಹುದು. ಇದರಿಂದ ತಾವು ಇವತ್ತು ಸಂತೋಷಪಡಬಹುದು. ಆದರೆ ಮುಂದೆ ಈ ಮಿಲ್ಕ್ ಯೂನಿಯನ್‌ಗಳನ್ನು ಡೆಸ್ಟ್ರಾಯ್ ಮಾಡುತ್ತೀರಿ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡ ಬೇಕೆಂದು ನಾನು ಈ ಸಂದರ್ಭದಲ್ಲಿ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಮಗೆ ಪ್ರತ್ಯಕ್ಷವಾಗಿ ಇದರ ಮೇಲೆ ತಮ್ಮ ಆಡಳಿತವನ್ನು ಮತ್ತು ಕಾರ್ಯಕ್ರಮವನ್ನು ಮಾಡುವುದಕ್ಕೆ ಆಗುವುದಿಲ್ಲವೆನ್ನ

ತಕ್ಕಂಥ ವಿಚಾರ ತಮಗೂ ಗೊತ್ತಿದೆ. ಗೊತ್ತಿರತಕ್ಕಂಥ ವಿಚಾರ. ಆದರೂ ಇವುಗಳ ಮೇಲೆ ತಮ್ಮ ಹತೋಟಿಯನ್ನು ಗಳಿಸಿಕೊಳ್ಳುವುದಕ್ಕೆ ನೀವು ಇದನ್ನು ಮಾಡುತ್ತಿದ್ದೀರಿ. ಈ ಪ್ರವೃತ್ತಿ ಸರಿಯಲ್ಲ. ಈ ಪ್ರವೃತ್ತಿಯನ್ನು ತಾವು ಕೈಬಿಡಬೇಕಂ. ಇದರಿಂದ ಏನೂ ಉಪಯೋಗವಾಗುವುದಿಲ್ಲ, ಅಧಿಕಾರಿಗಳು ಆಡಳಿತ ಪಕ್ಷದ ಮಂತ್ರಿಗಳ ಅಭಿಪ್ರಾಯವನ್ನು ತಿಳಿದುಕೊಂಡಿರತಕ್ಕಂಥ ಜನರು ಬಹಳ ಜನರು ಇದ್ದಾರೆ. ಯಾರೋ ಅಪರೂಪಕ್ಕೆ ಒಬ್ಬೊಬ್ಬರು ಅದಕ್ಕೆ ಮೇಲ್ಪಟ್ಟು ನಡೆದುಕೊಳ್ಳತಕ್ಕಂಥವರು. ನನಗೂ ಮಂತ್ರಿಯಾಗಿ ಸಾಕಷ್ಟು ಅನುಭವ ಇದೆ. ನಿಮಗೆ ಏನು ಅನಿಸುತ್ತದೆ ಎಂದು ಅವರಿಗೆ ಮೊದಲೇ ಗೊತ್ತಿರುತ್ತದೆ. ಅದರ ಪ್ರಕಾರ ನೋಟ್ ಪ್ರಿಪೇರ್ ಮಾಡಿ ತೆಗೆದುಕೊಂಡು ಬರುತ್ತಾರೆ. ಇದರಿಂದ ಅನೇಕತ್ಯವಾಗಿ ನೀವು ಕಾಂಟ್ರವರ್ಷಿಯಲ್ ಮಿನಿಸ್ಟರ್ ಎಂದು ಅನಿಸಿಕೊಳ್ಳಬೇಕೆಂದು ಕಾಣುತ್ತದೆ. ಏನಾದರೂ ಒಂದು ಕಾಂಟ್ರವರ್ಷಿ ವಿಷಯವನ್ನು ರೈಜ್ ಮಾಡುತ್ತಿರಬೇಕಾಗಿದೆ. ಮಿಲ್ ಫೆಡರೇಷನ್ ಸೊಸೈಟಿ ಆಕ್ಟ್ ಪ್ರಕಾರ ಚೆನ್ನಾಗಿ ಕೆಲಸ ಮಾಡುತ್ತಿದೆ. ಅದನ್ನು ತೆಗೆದು ಇದನ್ನೆಲ್ಲಾ ಮತ್ತೆ ಮಾಡತಕ್ಕಂಥ ಅಗತ್ಯ ಔಚಿತ್ಯ ಏನಾದರೂ ಇದೆಯೇ ಎಂದು ನನಗರ್ಥವಾಗುತ್ತಿಲ್ಲ. ತಾವು ದಯಮಾಡಿ ಈ ಆಜ್ಞೆಯನ್ನು ಹಿಂತೆಗೆದುಕೊಂಡು ಅಲ್ಲಿರತಕ್ಕ ಚುನಾಯಿತ ಅಧ್ಯಕ್ಷರು ಯಾರು ಇದ್ದಾರೋ, ಜಿಲ್ಲಾ ಬೋರ್ಡಿನ ಯೂನಿಯನ್‌ಗಳ ಅಧ್ಯಕ್ಷರುಗಳು ಯಾರಿದ್ದಾರೋ ಅವರ ಅಭಿಪ್ರಾಯವನ್ನು ತೆಗೆದುಕೊಳ್ಳಿ. ನಿಷ್ಪಕ್ಷಪಾತವಾಗಿ ನೀವು ಇಲ್ಲಿದ್ದಿ, ಈಗ ಅಲ್ಲಿಗೆ ಹೋಗಿದ್ದೀರಿ, ನಾಳೆ ನೀವು ಈ ಕಡೆ ಬರಬಹುದು, ನಾವು ಆ ಕಡೆ ಹೋಗಬಹುದು. ಈ ಸಂದರ್ಭದಲ್ಲಿ ನಾವು ಹೇಳಿದಂಥ ಅಧಿಕಾರಿಗಳನ್ನು ನಾವು ಹಾಕಿಕೊಳ್ಳುವುದಕ್ಕೆ ಆಗುತ್ತದೆಯೇ ? ನಾವು ಪಾಪದ ಕೆಲಸವನ್ನು ಮಾಡುವುದಕ್ಕೆ ನಾವು ಅಲ್ಲಿರುವವರೆಗೂ ಹೋಗಿರಲಿಲ್ಲ. ತಾವು ಇದನ್ನು ಪುನರ್‌ವಿಮರ್ಶೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ. ಬಹುಶ: ಮಂತ್ರಿಗಳು ಕೊಟ್ಟಿರುವ ಹೇಳಿಕೆಯಲ್ಲಿ ಸರ್ಕಾರ ಗ್ಯಾರಂಟಿ ನಿಂತಿರುವುದನ್ನು ಬಿಟ್ಟರೆ ಕೆ.ಡಿ.ಡಿ.ಸಿ.ಗೆ ನೇರವಾಗಿ ಯಾವುದೇ ರೀತಿಯ ಹಣವನ್ನು ಹೂಡಿಲ್ಲ ರೈಯಿಂದ ಕೆ.ಡಿ.ಡಿ.ಸಿ. ನಡೆಸುತ್ತಿದೆಯೋ ಆಪತ್ತಿನಿಂದ ಟ್ರಾನ್ಸ್‌ಫರ್ ಮಾಡಿದ್ದಿದ್ದರೆ ಈ ಸದನದಲ್ಲಿ ಈ ಪ್ರಶ್ನೆಯನ್ನು ಕೇಳುವ ಸಮಸ್ಯೆ ಉದ್ಭವವಾಗುತ್ತಿರಲಿಲ್ಲ. ಇವತ್ತು ಅದು ರಿಜಿಸ್ಟರ್ಡ್ ಕೋ-ಆಪರೇಟಿವ್ ಇದೆ. ಅಲ್ಲಿಗೆ ಚುನಾಯಿತ ಮಂಡಳಿ ಇದೆ. ಆದಕ್ಕೆ ೧೨ ಜನ ೧೩ ಜನ ಜಿಲ್ಲಾ ಒಕ್ಕೂಟದ ಅಧ್ಯಕ್ಷರುಗಳಿದ್ದಾರೆ. ಅವರುಗಳನ್ನು ಕೇಳದೆ ತಾವು ಏನಾದರೂ ವರ್ಗ ಮಾಡಿದರೆ. ಈ ಸ್ವಾಯತ್ತ ಸಂಸ್ಥೆಗಳಲ್ಲಿ, ಅವರು ಬೇಡ ಎಂದರೆ ಕಷ್ಟವಾಗುತ್ತದೆ. ಅವರ್ಯಾರೂ ಸರ್ಕಾರಿ ಅಧಿಕಾರಿಗಳಲ್ಲವೆಂದು ನಾನು ಸನ್ಮಾನ್ಯ ಸಚಿವರ ಗಮನಕ್ಕೆ ತರಬೇಕಾಗುತ್ತದೆ. ಅವರುಗಳೆಲ್ಲಾ ಫೆಡರೇಷನ್ ಎಂಪ್ಲಾಯೀಸ್ ಇದ್ದಾರೆ. ಅವರು ಡೆಪ್ಯೂಟೇಷನ್ ಮೇಲೆ ಅಲ್ಲಿಗೆ ಹೋಗಬೇಕಾಗುತ್ತದೆ. ಸರ್ಕಾರ ಏನಾದರೂ ಹಾಗೆ ತಿಳಿದುಕೊಂಡರೆ ಅದು ತಪ್ಪೆಂದು ನಾನು ಹೇಳಬೇಕಾಗುತ್ತದೆ. ಎರಡನೆಯದಾಗಿ ಯಾವುದೇ ಸಹಕಾರಿ ಕೆಳಗೆ ಸರ್ಕಾರ ಈವರೆಗೆ ಇಂಥಾ ಒಂದು ಕ್ರಮ ಕೈಗೊಂಡಿರಲಿಲ್ಲ. ಮೂರನೆಯದಾಗಿ ಸರ್ಕಾರಕ್ಕೆ ೩೦ಬಿ) ಮೂಲಕ ಏನಾದರೂ ಸಹಕಾರಿ ಸಂಘಗಳ ಒಳ್ಳೆಯದಕ್ಕೋಸ್ಕರ ಮಧ್ಯೆ ಪ್ರವೇಶ ಮಾಡುವುದು ಬಿಟ್ಟರೆ ವರ್ಗಾವರ್ಗಿ ಬಗ್ಗೆ ಇವತ್ತಿನವರೆಗೂ ಮಧ್ಯೆ ಬರುವಂಥ ಪರಿಸ್ಥಿತಿ ಉದ್ಭವವಾಗಿರಲಿಲ್ಲ. ಸನ್ಮಾನ್ಯ ಸಚಿವರು ಇವತ್ತು ಏನು ಇದನ್ನು ತಂದಿದ್ದಾರೆ, ನಾನು ಅವರಲ್ಲಿ ಬೇಡಿಕೊಳ್ಳುತ್ತೇನೆ. ಈ ಸಮಸ್ಯೆ ದೊಡ್ಡದಾಗಲಿಕ್ಕೆ ತಾವೇ ಕಾರಣರಾಗುತ್ತೀರಿ. ಸಂಬಂಧಪಟ್ಟ ಒಕ್ಕೂಟಗಳು ಅವರನ್ನು ತೆಗೆದುಕೊಳ್ಳುವುದಿಲ್ಲವೆಂದರೆ ತಮ್ಮ ಹತ್ತಿರ ಯಾವುದೂ ಉತ್ತರ ಇರುವುದಿಲ್ಲ. ಅವರಿಗೂ ಆ ಅಧಿಕಾರಿಗಳಿಗೂ ನಮಗೂ ಯಾವುದೇ ಸಂಬಂಧ ಇಲ್ಲ. ಈ ಅಧಿಕಾರ ಏನಾದರೂ ಇದ್ದರೆ ಅದು ಮಹಾಮಂಡಳಿಯ ಆಡಳಿತ ಮಂಡಳಿಗೆ ಇರುತ್ತದೆ. ಒಕ್ಕೂಟದ ಆಡಳಿತ ಮಂಡಳಿಗೆ ಇರುತ್ತದೆ ಅದೇ ರೀತಿ ತಾವು ಎನ್.ಡಿ.ಡಿ ಬಿಯಲ್ಲಿ ಅಗ್ರಿಮೆಂಟಿಗೆ ಸೈನ್ ಹಾಕಿದ್ದೀರಿ. ನಾಳೆ ನಮ್ಮ ರಾಜ್ಯಕ್ಕೆ ೧೬೦ ಕೋಟಿ ರೂಪಾಯಿಗಳ ಯೋಜನೆ ಮಂಜೂರಾಗಬೇಕಾಗಿದೆ. ಅದನ್ನು ಏನಾದರೂ ನಮಗೆ ಕೊಡುವುದಿಲ್ಲವೆಂದು ರಾಷ್ಟ್ರೀಯ ಅಭಿವೃದ್ಧಿ ನಿಗಮದವರು ಬದಿಗೊತ್ತಿದರೆ ಅದಕ್ಕೂ ಕೂಡಾ ಈ ಸರ್ಕಾರವೇ ಹೊಣೆಯಾಗಬೇಕಾಗುತ್ತದೆ. ಏಕೆಂದರೆ, ಈಗಾಗಲೇ ನನಗೆ ಟೆಲೆಕ್ಸ್ ಕೊಟ್ಟಿದ್ದಾರೆ. ಸರ್ಕಾರದ ಮಧ್ಯಸ್ಥಿಕೆಯನ್ನು ನಾವು ಸಹಿಸುವುದಿಲ್ಲ. ಆದರ ಬಗ್ಗೆ ಮಾತನಾಡುವುದಕ್ಕೆ ಸಂಬಂಧಪಟ್ಟ ಮಂತ್ರಿಗಳ ಜೊತೆ ನಮಗೆ ಒಂದು ವಿೂಟಿಂಗನ್ನು ನಿಗದಿ ಮಾಡಿಕೊಡಿ ಎಂದು ಅವರು ಕೇಳಿದ್ದಾರೆ. ಒಂದು ಕಡೆ ತಾವು ಅಭಿವೃದ್ಧಿಗೆ ಮಾರಕವಾಗುತ್ತೀರಿ, ಇನ್ನೊಂದು ಕಡೆ ಆಡಳಿತವನ್ನು ಮಹಾಮಂಡಳಿ ನಡೆಸುವುದಕ್ಕೆ ತಾವೇ ಅಡ್ಡಿ ಮಾಡುತ್ತಿದ್ದೀರಿ. ತಮ್ಮ ಭಾವನೆಗಳು ಏನಾದರೂ ಇದ್ದಿದ್ದರೆ ಅದನ್ನು ಬೇರೆ ರೂಪದಲ್ಲಿ ವ್ಯಕ್ತ ಮಾಡಬಹುದಾಗಿತ್ತು. ಅದಕ್ಕೆ ಮಹಾಮಂಡಳಿಯವರು ಅಡ್ಡಿ ಮಾಡುತ್ತಿರಲಿಲ್ಲ. ಆದ್ದರಿಂದ, ಈ ವರ್ಗಾವರ್ಗಿಯ ಆರ್ಡರನ್ನು ಅಬೆಯನ್ಸ್‌ನಲ್ಲಿ ಇಡಬೇಕಾಗುತ್ತದೆ. ಇದಕ್ಕೆ ತಮಗೆ ಅಧಿಕಾರವೇ ಇಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಈ ಆದೇಶಕ್ಕೆ

ಯಾವ ಅಧಿಕಾರಿಯಿಂದ ಸೈನ್ ಹಾಕಿ ಕೊಟ್ಟಿದ್ದಾರೋ, ಆ ಆದೇಶವನ್ನು ಹಿಂತೆಗೆದುಕೊಳ್ಳುವುದಕ್ಕೆ ಆಗುತ್ತದೆಯೋ ಇಲ್ಲವೋ ಎಂದು ನೋಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಬಿ ಬಸವಲಿಂಗಪ್ಪ —ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು, ಮಾನ್ಯ ಸದಸ್ಯರಾದಂಥ ಶ್ರೀಮಾನ್ ಸಿಂಧ್ಯಾರವರು. ಅವರದೇ ಧಾಟಿ ಅವರದೇ ಭಾಷೆಯಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಾರೆ ಸಂತೋಷ. ಕೆ.ಎಂ.ಎಫ್. ಎನ್ನುತಕ್ಕಂತಾದ್ದು ಅದು ಸಹಕಾರಿ ಸಂಸ್ಥೆ. ಡಿಸ್ಟ್ರಿಕ್ಟ್ ಯೂನಿಯನ್‌ಗಳು ಸಹ ಸಹಕಾರಿ ಸಂಸ್ಥೆಗಳು. ಈ ಸಂಸ್ಥೆಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿಯೂ ಸ್ಥಾಪನೆ ಮಾಡಿಕೊಂಡಿಲ್ಲ. ಕೆಲವೇ ಜಿಲ್ಲೆಗಳಲ್ಲಿ ಮಾಡಿದ್ದಾರೆ. ಇವರಲ್ಲಿ ಕೆ.ಎಂ.ಎಫ್. ಏನು ಒಂದು ಸಂಸ್ಥೆ ಇದೆ, ಅವರ ಏನು ವ್ಯಾಪ್ತಿ ಇದೆ, ಅದರಂತೆ, ಕೆ.ಎಂ.ಎಫ್.ನ ಬೋರ್ಡ್‌ನವರು ಹೇಳಿದ ಹಾಗೆ ನಡೆಯಬೇಕೇ ಹೊರತು ಬೇರೆಯವರು ಇಲ್ಲ. ಸಲಹೆ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಡಿ. ಬಿ. ಚಂದ್ರೇಗೌಡ. —ಹಾಗಾದರೆ ನೀವು ಹೇಳಿದ ಹಾಗೆ ನಡೆಯಬೇಕೆಂದಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಈ ವಿಚಾರವಾಗಿ ಸರಕಾರಕ್ಕೆ ಯಾವ ಅಧಿಕಾರ ಇಲ್ಲ ಎನ್ನುತಕ್ಕಂಥಾದ್ದು ಇಲ್ಲವೇ ಇಲ್ಲ. ಎಲ್ಲಿಯವರೆಗೆ ಜಿಲ್ಲಾ ಯೂನಿಯನ್‌ಗಳು ಇರುತ್ತವೆ ಅಲ್ಲಿಯವರೆಗೆ ಅವರ ಸ್ವಾಯತ್ತತೆಯನ್ನು ಅಂದರೆ ಲೇವಾದೇವಿಯನ್ನು ನೋಡಬೇಕಾಗುತ್ತದೆ. ಕೆ.ಎಂ ಎಫ್.ನಲ್ಲಿ ನಾವು ಏನು ಬಂಡವಾಳವನ್ನು ಹಾಕಿದ್ದೇವೆ. ಅದರಲ್ಲಿ ಬರುವ ಪ್ರತಿಪೈಸೂ ಯೂನಿಟ್‌ಗಳೂ ದುಡಿದು, ಹಣವನ್ನು ತೀರಿಸಿ, ನಂತರ ತಾವೇ ವಹಿಸಿಕೊಳ್ಳಬೇಕೆಂಬುದು ನಮ್ಮ ಉದ್ದೇಶ. ಹೀಗೆ ಇಂಥ ಸಂಸ್ಥೆಗಳು ತಮ್ಮನ್ನು ತಾವು ನಡೆಸಿಕೊಂಡು ಹೋಗುವ ಕಾಲ ಬರಬೇಕೆಂದು ನನಗೆ ಆಶೆ. ಆದುದರಿಂದ ಅಲ್ಲಿಯವರೆಗೆ ಅಂದರೆ ಆ ಶಕ್ತಿ ಸಂಸ್ಥೆಗಳಿಗೆ ಬರುವವರೆಗೆ ನಾವು ಅವರಿಗೆ ನಿರ್ದೇಶನ, ಬುದ್ಧಿವಾದಗಳನ್ನು ಕೊಡದೇ ಹೋದರೆ ಸ್ವೇಚ್ಛಾವರ್ತನೆಗೆ ಸಹಕರಿಸಿದಂತಾಗುತ್ತದೆ. ಈಗ ಬೆಂಗಳೂರು ಡೈರಿಯ ಬಗ್ಗೆ ತಮಗೆ ತಿಳಿದ ವಿಚಾರ ಸಾಕಷ್ಟಿದೆ. ಎಲ್ಲವೂ ಸರಿಯಾಗಿ ಇದೆಯೇ ? ಬೆಂಗಳೂರು ಡೈರಿಗೆ ನಾನು ಒಮ್ಮೆ ಭೇಟಿ ಕೊಟ್ಟಿದ್ದೆ; ಅವರ ಮೂರು ವರ್ಷಗಳ ವ್ಯವಹಾರ ೬೫೦ ಕೋಟಿ ರೂಪಾಯಿಗಳು ಇದರ ಲೆಕ್ಕಾಚಾರಗಳನ್ನು ಹೇಗೆ ಮತ್ತು ಯಾವ ರೀತಿಯಲ್ಲಿ ಇಟ್ಟಿದ್ದಾರೆ, ಆಡಿಟ್ ಮಾಡಿದ್ದಾರೆಯೇ ? ಎಂಬಿತ್ಯಾದಿಗಳ ಬಗ್ಗೆ ಪರಿಶೀಲಿಸಲಾಗಿ, ೧೯೮೭-೧೯೮೮ರಿಂದ ಇಪ್ಪತ್ತಿನವರೆಗೆ ಅದರ ಆಡಿಟ್ ಮಾಡಿಲ್ಲ, ಅಂತೆಯೇ ಅಕೌಂಟ್ಸ್ ಯಾವ ರೀತಿಯಾಗಿ ಮಾಡಿದ್ದಾರೆ, ಬಿಟ್ಟಿದ್ದಾರೆ ಎಂಬ ಬಗ್ಗೆ ಈಗ ಚರ್ಚೆ ಮಾಡುವುದು ಅನಾವಶ್ಯಕ. ಇದನ್ನೆಲ್ಲಾ ನೋಡಿದರೆ ಸ್ವಾಯತ್ತತೆ ಬೇಕೇ ? ಎಂಬ ಪ್ರಶ್ನೆಯೂ ಬರುತ್ತದೆ. ಸ್ವಾಯತ್ತತೆ ಬೇಕು, ಬೇಡ ಎಂದು ನಾನು ಹೇಳುವವನು ಅಲ್ಲ. ಸ್ವಾಯತ್ತತೆಯನ್ನು ನಾವು ಯಾವುದಕ್ಕೋಸ್ಕರವಾಗಿ ಮಾಡಿದ್ದೇವೆ ? ಸಾರ್ವಜನಿಕರ ಹಿತಕ್ಕೋಸ್ಕರ, ಗ್ರಾಹಕರಿಗೋಸ್ಕರ. ಉತ್ಪಾದಕರಿಗೋಸ್ಕರ ಈ ಸ್ವಾಯತ್ತತೆಯನ್ನು ಮಾಡಿದ್ದೇವೆ. ರೆಗ್ಯುಲೇಟರಿ ಆಕ್ಷನ್ ಇದೇ ಹೋದರೆ ಎಲ್ಲಿಯೂ ಸರಿಯಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ೧೯೮೭-೮೮ನೇ ಸಾಲಿನಿಂದ ಆಡಿಟ್ ನಡದಿ ಇಲ್ಲ ಲೆಕ್ಕಪತ್ರಗಳ ತಪಾಸಣೆ ಇಲ್ಲ, ಈ ಲೆಕ್ಕಪತ್ರಗಳನ್ನು ಆಡಿಟರ್‌ಗೆ ಒಪ್ಪಿಸಿ ಅವರ ಸಮಜಾಯಿಶಿ ತೆಗೆದುಕೊಂಡು ಕೆಲಸವನ್ನು ಮಾಡದೇ ಹೋದರೆ ಸಂಸ್ಥೆಯನ್ನು ಮುನ್ನಡೆಸಿಕೊಂಡು ಹೋಗಲು ಸಾಧ್ಯವೇ ? ಸಹಕಾರಿ ಸಂಸ್ಥೆಗಳಿಗೆ ಸ್ವಾಯತ್ತತೆಯನ್ನು ಕೊಡುವ ವಿಚಾರ ಬಹಳ ಒಳ್ಳೆಯ ವಿಚಾರವೇ ಆಗಿದೆ. ಸ್ವಾಯತ್ತತೆ ಕೊಟ್ಟಾಗ ತೆಗೆದುಕೊಂಡವರು ಸರಿಯಾಗಿ ನಿರ್ವಹಿಸಿಕೊಂಡು ಹೋಗಬೇಕು. ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಣೆ ಮಾಡಿಕೊಂಡು ಹೋಗಬೇಕು. ಹೂಡಿದ ಹಣಕ್ಕೆ ಜವಾಬ್ದಾರಿಯುತವಾಗಿ ವ್ಯವಹಾರ ಮಾಡಿಕೊಂಡು ಹೋಗತಕ್ಕಂಥ ನಿಷ್ಠೆ ಇರಬೇಕು. ನಾವು ಕೋ-ಆಪರೇಟಿವ್ ಸೊಸೈಟಿ ಆಕ್ಟ್ ೩೦ (ಬಿ) ಪ್ರಕಾರ ನಿರ್ದೇಶನವನ್ನು ಕೊಡುತ್ತೇವೆ ಎಂದು ಇಟ್ಟುಕೊಳ್ಳೋಣ. ಹಾಗೆ ಕೊಟ್ಟಿರುವುದು ನ್ಯೂನತೆಗಳನ್ನು ಸರಿಪಡಿಸಬೇಕೆಂಬ ದೃಷ್ಟಿ ಇಟ್ಟುಕೊಂಡು ಕೊಟ್ಟಿದ್ದೇವೆ ಸ್ವಾಯತ್ತತೆ ಇದೆ, ಅದಕ್ಕಾಗಿ ನಿರ್ದೇಶನವನ್ನು ಕೊಡಬೇಡಿ ಎಂದು ಹೇಳುವುದು ಸರಿಯಾದುದಲ್ಲ. ನಾವು ನಿಮಗೆ ಹಸ್ತಕ್ಷೇಪ ಮಾಡಿ ನೀವು ಕೆಲಸ ಮಾಡಬೇಡಿ ಎಂದು ಹೇಳಲಿಲ್ಲ. ಸಂಸ್ಥೆಗಳು ಸರಿಯಾಗಿ ಕೆಲಸ ಮಾಡಿದ್ದರೆ ನಾವು ಇಂಟರ್‌ಫೇರ್ ಆಗತಕ್ಕಂಥ ಪ್ರಶ್ನೆಯೇ ಬರುವುದಿಲ್ಲ. ಯಾರಾರು ಅಧಿಕಾರಿಗಳು ಇರುತ್ತಾರೆ. ಅವರು ಸರಿಯಾಗಿ ಕೆಲಸ ಮಾಡದಿದ್ದರೆ ಅಂಥವರನ್ನು ವರ್ಗಾವಣೆ ಮಾಡತಕ್ಕಂಥಾದ್ದು ಸರಕಾರದ ಕರ್ತವ್ಯವಾಗಿದೆ. ಹಾಗೆ ಮಾಡಲು ನಮಗೆ ಅಧಿಕಾರವೂ ಇದೆ. ಕೆ.ಎಂ.ಎಫ್.ಅನ್ನು ಕೋ-ಆಪರೇಟಿವ್ ಆಕ್ಟ್‌ನ ಪ್ರಕಾರ ರಿಜಿಸ್ಟರ್ ಮಾಡಿಕೊಂಡಿದ್ದೇವೆ. ಅದರ ಬಗ್ಗೆ ಇರುವ ಬೈಲಾವನ್ನು ತಾವುಗಳು ನೋಡಿದರೆ ತಮಗೆ ಅದು ತಿಳಿಯುತ್ತದೆ. ಅದರ ಪ್ರಕಾರ ಅಲ್ಲಿಯ ಅಧಿಕಾರಿಗಳ ಮೇಲೆ ಹತೋಟಿ ಇಡುವುದಕ್ಕೆ ಸರಕಾರಕ್ಕೆ ಅಧಿಕಾರ ಇದೆಯೇ ಇಲ್ಲವೇ ಎಂಬ ಬಗ್ಗೆ ನಿರ್ಧಾರಕ್ಕೆ ಬರೋಣ. ನನಗೆ ಸ್ವಾಯತ್ತತೆಯಲ್ಲಿ ಸಂಪೂರ್ಣವಾದ ನಂಬಿಕೆ ಇದೆ. ಆದರೆ ಯಾವುದೇ ಸ್ವಾಯತ್ತತೆಗೆ ಕಡಿವಾಣ ಇಲ್ಲದಿದ್ದರೆ ಅದು ಸ್ವೇಚ್ಛೆಯಾಗುತ್ತದೆ ಎಂದು ಹೇಳಬಯಸುತ್ತೇನೆ.

೧೧.೦೦ ಎ.ಎಂ.

ಸ್ವೇಚ್ಛಾಚಾರವನ್ನು ಸಹಿಸಿಕೊಂಡು ಸಂಸ್ಥೆಗಳನ್ನು ಸರಿಯಾಗಿ ನಡೆಸುವುದಕ್ಕೆ ಆಗುವುದಿಲ್ಲ. ಉದಾಹರಣೆಗೆ ಈಗ ಹಾಸನದ ಡೈರಿಯನ್ನೇ ತೆಗೆದುಕೊಳ್ಳಿ. ಇದು ಕೂಡ ವಿಲ್ಕ್ ಯೂನಿಯನ್ನೇ. ಅಲ್ಲಿ ಏನೇನು ಆಗಿದೆ ಏನೇನು ಆಗಿಲ್ಲ ಎಂಬುದಕ್ಕೆಲ್ಲ ಲೆಕ್ಕ ಇದೆಯೇ ? ಎನ್‌ಕ್ವಯರಿ ಮಾಡಿಸುತ್ತೇವೆ. ಏನು ಮಾಡಬೇಕೋ ಎಲ್ಲಾ ಮಾಡಿಸುತ್ತೇನೆ. ಈ ರೀತಿ ಆದರೆ ನಾವು ಸ್ವಾಯುತ್ತತೆ ಮೇಲೆ ಭಾಷಣ ಮಾಡುತ್ತಾ ಹೋದರೆ ಏನು ಉಪಯೋಗ? ಡೆಮಾಕ್ರಸಿಯಲ್ಲಿಯೇ ಸ್ವೇಚ್ಛೆಯಾದರೆ ಒಂದು ಕಡಿವಾಣ ಇಲ್ಲದಿದ್ದರೆ ಹೇಗೆ ? ಆದರಲ್ಲಿ ಏನು ಬೇಕಾದರೂ ಮಾಡಬಹುದೋ ? ಇದಕ್ಕೊಸ್ಕರ ಸ್ಪಷ್ಟವಾಗಿ ಹೇಳುತ್ತೇನೆ, ನಾವು ಏನು ಮಾಸ್ ಟ್ರಾನ್ಸ್‌ಫರ್ ಮಾಡಿಲ್ಲ ಬರೀ ೧೧ ಜನರನ್ನು ಮಾತ್ರ ಮಾಡಿದ್ದೇವೆ. ದುರುದ್ದೇಶ ಇಟ್ಟುಕೊಂಡು ಮಾಡಿದ್ದೇವೆಯೇ ? ಹೇಳಿ. ಬೇರೆ ಉದ್ದೇಶ ಏನೂ ಇಲ್ಲ. ಇಂಥಿಂಥವರನ್ನೇ ಇಂಥಿಂಥ ಕಡೆ ಹಾಕಬೇಕು ಎಂದು ಏನೂ ಮಾಡಿಲ್ಲ. ಯಾರಾದರೂ ಬೇಕಾದರೆ ಬಂದು ಕೇಳಿ ನನ್ನನ್ನು ? ನಾನು ಏನಾದರೂ ತಪ್ಪು ಮಾಡಿದರೆ ಇಂಥ ತಪ್ಪನ್ನು ನೀವು ಮಾಡಿದಿರಿ ಅದನ್ನು ಸರಿಮಾಡಿಕೊಳ್ಳಿ ಎಂದು ಹೇಳಿ ಅದನ್ನು ಸರಿಮಾಡಿಕೊಳ್ಳುತ್ತೇನೆ. ಬೇಡ ಎನ್ನುವವರು ಯಾರೂ ಇಲ್ಲ. ಜೀವಮಾನ ಪೂರ್ತಿ ಅಲ್ಲಿ ಇರುವವರನ್ನು ವರ್ಗಮಾಡಬಾರದೆ ಹೇಳಿ ? ನಮ್ಮ ಗ್ರಾಮೀಣ ಅಭಿವೃದ್ಧಿ ಇಲಾಖೆಯಲ್ಲಿ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಲ್ಲಿ ಜೀವನ ಪೂರ್ತ ಇದ್ದರು. ಅವರು ಏನೇನೆಲ್ಲಾ ಮಾಡಿದರೂ ಅವರನ್ನು ಇಲ್ಲಿಯೇ ಇಟ್ಟುಕೊಳ್ಳಬೇಕೇ ? ಅದಕ್ಕೊಸ್ಕರವೇ ಮಾಸ್ ಟ್ರಾನ್ಸ್‌ಫರ್ ಮಾಡುತ್ತಿದ್ದೇವೆ. ಆದ್ದರಿಂದ ಸದಸ್ಯರು ಅದರ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿದರೆ ಉಪಕಾರವಾಗುತ್ತದೆ.

ಶ್ರೀ ಎಚ್. ವಿಶ್ವಾನಾಥಯ್ಯ.— ನಮ್ಮ ಪ್ರಶ್ನೆ ಮೂಲಭೂತವಾಗಿ ಪ್ರಜಾಪ್ರಭುತ್ವದಲ್ಲಿ ನಿಮಗೆ ಆಸ್ಥೆ ಇದೆಯೇ ಎನ್ನುವುದು.

ಶ್ರೀ ಬಿ. ಬಸವಲಿಂಗಪ್ಪ.—ಇದೊಂದು ಹೇಳುತ್ತೇನೆ. ಮಾನ್ಯ ಸದಸ್ಯರು ಇನ್ನು ಮೇಲಾದರೂ ಆರೋಪ ಮಾಡುವುದನ್ನು ಬಿಟ್ಟರೆ ಚೆನ್ನಾಗಿರುತ್ತದೆ. ಇಲ್ಲದಿದ್ದರೆ ಅಷ್ಟರ ಮಟ್ಟಿಗೆ ಜನಗಳ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗುತ್ತವೆ. ಎಂದು ಹೇಳುತ್ತೇನೆ. ಈ ಉತ್ತರದಿಂದ ಮಾನ್ಯ ಚಂದ್ರೇಗೌಡರು ತೃಪ್ತರಾಗಿದ್ದಾರೆಂದು ತಿಳಿದುಕೊಂಡಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.— ಪ್ರಶ್ನೆ ಅದಲ್ಲ ಸ್ವೇಚ್ಛೆ ಯಾರು ಮಾಡಿದರು ಎನ್ನುವುದು. ಸ್ವೇಚ್ಛೆಯನ್ನು ಮಂತ್ರಿಗಳು ಮಾಡಿದರೆ ಸರಿಹೋಗುತ್ತದೆಯೇ ಸಹಕಾರಿ ಕ್ಷೇತ್ರದಲ್ಲಿ ಸ್ವಾಯುತ್ತತೆಯನ್ನು ನಾವು ಪ್ರಶ್ನೆ ಮಾಡಿಲ್ಲ. ಸರ್ಕಾರ ತನ್ನ ಜವಾಬ್ದಾರಿಯನ್ನು ನೆರವೇರಿಸುವಾಗ ತಾನು ಮಾಡಿಕೊಂಡಿರುವ ಕಮಿಟ್‌ಮೆಂಟ್‌ಗಳ ಬಗ್ಗೆ ಎಚ್ಚರದಿಂದ ಇರಬೇಕು. ನ್ಯಾಷನಲ್ ಡೈರಿ ಡೆವಲಪ್‌ಮೆಂಟ್ ಬೋರ್ಡ್‌ಗೂ ರಾಜ್ಯ ಸರ್ಕಾರಕ್ಕೂ ಮಧ್ಯ ಇರುವ ಅಗ್ರಿಮೆಂಟ್ ಕಾಪಿ ತಮ್ಮ ಹತ್ತಿರ ಇದೆಯೇ ? ಅದನ್ನು ನೋಡಿದ್ದೀರಾ? ಇದನ್ನೆಲ್ಲಾ ನೋಡಿದರೆ ನಿಮ್ಮ ಕೆಲಸ ಸ್ವೇಚ್ಛೆದೆಯೆಂದು ನಾನು ಹೇಳುತ್ತೇನೆ. ಆ ಕಾಪಿಯನ್ನು ನೀವು ಓದಿದ್ದರೆ ಇಂಥ ಸ್ವೇಚ್ಛಾಚಾರಕ್ಕೆ ತಾವು ಇಳಿಯುತ್ತಿರಲಿಲ್ಲವೆಂದು ನನಗನ್ನಿಸುತ್ತದೆ, ಹಾಸನ ಡೈರಿಯಲ್ಲಿ ತಪ್ಪಾಗಿದ್ದರೆ ಆಡಿಟ್ ಮಾಡಿಸಿ ಸಂಬಂಧಪಟ್ಟ ಸಿಬ್ಬಂದಿಯನ್ನು ಸಸ್ಪೆಂಡ್ ಮಾಡಿ, ನಾವು ಕೇಳಬಾರದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.— ಆಗಲೂ ಬರುತ್ತೀರಿ.

ಶ್ರೀ ಡಿ. ಬಿ. ಚಂದ್ರೇಗೌಡ.— ಇಲ್ಲ, ಆಡಿಟ್ ಕೆಲಸ ಮಾಡಿಸುವುದು ನಿಮ್ಮ ಜವಾಬ್ದಾರಿ. ಕಾನೂನು ಪ್ರಕಾರ ಅಧಿಕಾರ ಇಲ್ಲದ ಕಡೆ ಏಕೆ ಹಸ್ತಕ್ಷೇಪ ಮಾಡುತ್ತೀರಿ ? ಹಾಗಾದರೇ ಎಲ್ಲವನ್ನು ಸರ್ಕಾರ ವಹಿಸಿಕೊಂಡು ಬಿಡಲಿ. ನಿಮ್ಮ ಕೈಯಲ್ಲಿ ಆಗದಿದ್ದರೆ ಶಾಸನಬದ್ಧವಾಗಿ ಹೇಗೆ ಮಾಡಿಸಬೇಕೆಂಬುದು ನಮಗೆ ಗೊತ್ತಿದೆ ನಾವು ಮಾಡಿಸುತ್ತೇವೆ. ಆದ್ದರಿಂದ ನಿಮ್ಮ ಈ ಪ್ರವೃತ್ತಿ ಸ್ವೇಚ್ಛಾಚಾರವೇ ಹೊರತು ಯೂನಿಯನ್ ಅಥವಾ ಕೆ.ಎಂ.ಎಫ್. ಸಂಸ್ಥೆಯದು ಅಲ್ಲ ಎಂದು ಹೇಳುತ್ತೇನೆ. ಕನಿಷ್ಟ, ಮಿನಿಮಮ್ ಕರೆಕ್ಟಿ ಏನು ? ಸಂಬಂಧಪಟ್ಟ ಯೂನಿಯನ್‌ಗಳನ್ನು ಕನ್‌ಸಲ್ಟ್ ಮಾಡಿ ನೋಡಪ್ಪ ಇಲ್ಲಿ ತಪ್ಪಾಗಿದೆ, ಇದನ್ನು ಬದಲಾವಣೆ ಮಾಡುತ್ತೇವೆ ಎಂದು ಹೇಳಿ. ರಿಜಿಸ್ಟ್ರಾರ್‌ಗೆ ಹೇಳಿ ರಿಜಿಸ್ಟ್ರಾರ್‌ರವರಿಂದ ಬದಲಾವಣೆ ಮಾಡಿಸಿ. ಸರ್ಕಾರ ಇಲ್ಲಿಂದ ಆದೇಶವನ್ನು ಕೊಡುತ್ತದೆ. under what authority ? ಸೆಕ್ಷನ್ ೩೦ (ಬಿ) ಅದನ್ನು ತಾವು ಕೋಟ್ ಮಾಡಿದ್ದೀರಿ. ನಿಮಗೆ ಸೆ ನ್ ೩೦ (ಬಿ) ಒಳಗೆ ಹೇಳಿರತಕ್ಕಂಥ ಅಧಿಕಾರ ಇಲ್ಲಿ...

ಶ್ರೀ ಹೆಚ್. ವಿಶ್ವನಾಥಯ್ಯ.— ''ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದಂತೆ'' ಆಗಿದೆ. ಅಲ್ಲಿ ಆಡಿಟ್ ವಿಷಕ್ಕೆ ಆಗಿಲ್ಲ.

(ಗೊಂದಲ)

SRI D. B. CHANDREGOWDA.— Sir, I seek protection of the Chair. ನಾವು ಕೇಳಿದ ಪ್ರಶ್ನೆಗಳಿಗೆ ಮಂತ್ರಿಗಳಿಂದ ಉತ್ತರ ಬರುವುದಿಲ್ಲ. ಇವರು ಹೀಗೆ ಸಹಕಾರಿ ಸಂಸ್ಥೆಗಳನ್ನು ಸ್ವೇಚ್ಛಾಚಾರಿಗಳು ಎಂದು ಕರೆಯತಕ್ಕಂಥ ಪ್ರವೃತ್ತಿಯನ್ನು ತಾವು ತೆಗೆದುಕೊಂಡರೆ ನಾವು ಆದನ್ನು ಅಷ್ಟೇ ಕಟುವಾಗಿ ಪ್ರತಿಭಟಿಸಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.— ಎಲ್ಲಿ ಮಾಡಿದ್ದೇವೆ ?

ಶ್ರೀ ಡಿ. ಬಿ. ಚಂದ್ರೇಗೌಡ.— ನೀವು ಮಾಡಿದ್ದೀರಿ. ನಿಮ್ಮ ಈ ರೀತಿ ಮಧ್ಯೆ ಪ್ರವೇಶವನ್ನು ಸಹಿಸಿಕೊಂಡಿರುವುದಕ್ಕೆ ಸಾಧ್ಯ ಇಲ್ಲ. ಇದು ಸರಿಯಾದ ಕ್ರಮ ಅಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಮಾನ್ಯ ಮಂತ್ರಿಗಳು ಇದನ್ನು ಸರಿಪಡಿಸಿಕೊಳ್ಳದಿದ್ದರೆ ನಾವು ಇದನ್ನು ಖಂಡಿಸತಕ್ಕಂಥ ಕೆಲಸವನ್ನು ಮಾಡಬೇಕಾಗುತ್ತದೆ.

ಶ್ರೀ ಎಂ. ಪಿ. ವೆಂಕಟೇಶ್.— ಎಲ್ಲಾ ಯೂನಿಯನ್ ಅಧ್ಯಕ್ಷರುಗಳು ಕಾಂಗ್ರೆಸ್ ಪಕ್ಷದವರು ಆಗಿಲ್ಲ ಎಂದು ಹೇಳಿ ಈ ತರಹ ಕೆಲಸವನ್ನು ಮಾಡುತ್ತಿರುವುದು. ಎಲ್ಲಾ ಯೂನಿಯನ್‌ಗಳೂ ವಿರೋಧ ಪಕ್ಷದಲ್ಲಿರುವುದರಿಂದ ಆ ಯೂನಿಯನ್ ಅಧ್ಯಕ್ಷರುಗಳಿಗೆ ತೊಂದರೆ ಕೊಡಬೇಕು ಎನ್ನುವ ದೃಷ್ಟಿಯಿಂದ ಈ ರೀತಿ ಎಂ. ಡಿ.ಗಳನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ.

ಶ್ರೀ ಜೆ. ಸಿ. ಮಾಧುಸ್ವಾಮಿ.— ಸನ್ಮಾನ್ಯ ಅಧ್ಯಕ್ಷರೇ, ಮೂಲಭೂತವಾದಪ್ರಿನ್ಸಿಪಲ್ ಬಗ್ಗೆ ನಾವು ಪ್ರಶ್ನೆಯನ್ನು ಕೇಳಿದ್ದವು. ಸರ್ಕಾರವಾಗಲಿ, ಮಂತ್ರಿಗಳಾಗಲೀ ಇಲ್ಲಿ ಇಂಟರ್‌ಫಿಯರ್ ಆಗಲಿಕ್ಕೆ ಅಧಿಕಾರ ಇದೆಯೇ ಇಲ್ಲವೇ ಎಂದು ಉತ್ತರವನ್ನು ಹೇಳಬೇಕಾಗುತ್ತದೆ. ಆ ರೀತಿ ಇದ್ದರೆ ಯಾವ ಸೆಕ್ಷನ್ ಕೆಳಗಡೆ ಅವರು ಬಂದಿದ್ದಾರೆ ಎಂದು ಉತ್ತರವನ್ನು ಹೇಳಬೇಕಾಗುತ್ತದೆ. ಕೋ—ಆಪರೇಟಿವ್ ಸಂಸ್ಥೆಯಲ್ಲಿ ೩೦ (ಬಿ)ಯನ್ನು ಕೂಡಾ ಇಂಪೋಸ್ ಮಾಡಲಿಕ್ಕೆ ಅಧಿಕಾರ ಇಲ್ಲ. ಏಕೆಂದರೆ ಇವತ್ತಿನ ವರೆಗೂ ಯಾವುದೇ ಸರ್ಕಾರ ಟ್ರಾನ್ಸ್‌ಫರ್ ಮಾಡಲಿಕ್ಕೆ ಈ ೩೦(ಬಿ)ಯನ್ನು ಉಪಯೋಗ ಮಾಡಿರಲಿಲ್ಲ. ನಾಲ್ಕನೆಯದು ಸ್ಪಷ್ಟವಾದ ಪ್ರಶ್ನೆಯನ್ನು ಕೇಳಿದ್ದೇವೆ. ಅವರು ತಮ್ಮ ಅಧಿಕಾರಿಗಳಲ್ಲ. ಅವರು ಮಹಾಮಂಡಲದ ಅಧಿಕಾರಿಗಳು. ಡೆಪ್ಯೂಟೇಷನ್ ಮೇಲೆ ಒಕ್ಕೂಟಕ್ಕೆ ಹೋಗಬೇಕಾಗಿದೆ. ಅದನ್ನು ಏನಾದರೂ ಮಾಡಿದರೆ ಒಕ್ಕೂಟದಲ್ಲಿ ನೀವು ಕೇಳಿತುಕೊಂಡು ಕೇಳಿ ಅವರನ್ನು ಹಾಕಬೇಕಾಗುತ್ತದೆ, ಒಂದು ಪ್ಯಾನಲನ್ನು ಕೊಡಬೇಕಾಗುತ್ತದೆ. ಮೂರರಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳಿ ಎಂದು ಒಕ್ಕೂಟ ಆಡಳಿತದ ಮಂಡಳಿಗೆ ನಾವು ಹೇಳಬೇಕಾಗುತ್ತದೆ ಎಂದು ಕೇಳಿದ್ದೇವೆ. ಆಡಿಟ್ ಆಗಿಲ್ಲ ಬೆಂಗಳೂರು ಡೈರಿಯದು ಎಂದು ಅವರು ಹೇಳಿದ್ದಾರೆ. ಇಡೀ ಕೋ—ಆಪರೇಟಿವ್ ವ್ಯವಸ್ಥೆ ಕೆಳಗೆ ಫ್ರೀ ಆಂಡ್ ಕನ್‌ಕರೆಂಟ್ ಆಡಿಟ್ ಮಾಡಿಸಿರುವುದು ಮಹಾಮಂಡಲ ಮಿಲ್ಕ್ ಮಾತ್ರ. ಸ್ಪಾಟ್ಚುಟರಿ ಆಡಿಟ್ ಆಗುವುದಕ್ಕೂ ಬಿಡುವುದಕ್ಕೂ ಮಹಾಮಂಡಲಕ್ಕೆ ಸಂಬಂಧ ಇಲ್ಲ. ಅದಕ್ಕೂ ಸರ್ಕಾರವೇ ಉತ್ತರವನ್ನು ಹೇಳಬೇಕಾಗುತ್ತದೆ. ನಾವಲ್ಲ. ನಾವೇ ಏತಕ್ಕೆ ಆಡಿಟ್ ಮಾಡಿಸಿಲ್ಲ ಎಂದು ತಮಗೆ ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ನೀವು ನಮಗೆ ಕೇಳಬಾರದಾಗಿತ್ತು. ಈ ಪ್ರಶ್ನೆಯನ್ನು ೩೦ (ಬಿ) ಯನ್ನು ಇವರು ಇಷ್ಟೂ ಮಾಡಿ ಬೆನಿಫಿಟನ್ನು ಕೊಡಿ ನೌಕರರಿಗೆ ಎಂದು ಹೇಳುತ್ತಾರೆ, ಮತ್ತೆ ಎರಡು ವರ್ಷ ಆದವರಿಗೆ ಖಾಯಂ ಮಾಡಿ ಎಂದು ಹೇಳುತ್ತಾರೆ, ಮತ್ತು ಇನ್ನೊಂದು ಕಡೆ ೬೦೦—೮೦೦ ಜನರನ್ನು ತೆಗೆಯಿರಿ ಎಂದು ಹೇಳುತ್ತಾರೆ, ಇದೆಲ್ಲವನ್ನೂ ಮಹಾಮಂಡಲದವರು ಮಾಡಬಹುದೇ ? ಇದಕ್ಕೆ ಮಂತ್ರಿಗಳು ಉತ್ತರವನ್ನು ಹೇಳಬೇಕಾಗುತ್ತದೆ. ಏಕೆಂದರೆ ಅವರು ಛಾರ್ಜ್ ಮಾಡಿದ್ದಾರೆ. ನಾನು ಮಹಾಮಂಡಲದ ಅಧ್ಯಕ್ಷನಾಗಿರುವುದರಿಂದ ಕೇಳಬೇಕಾಗುತ್ತದೆ. ಆಡಿಟ್ ಆಗುವುದಕ್ಕೂ ಅದಕ್ಕೂ ಸಂಬಂಧವಿಲ್ಲ. ತಾವು ಮಂತ್ರಿಗಳಾಗಿ ತಮಗೆ ಗೊತ್ತಿದೆಯೇ ? ನಾವು ಚಾರ್ಟರ್ಡ್ ಅಕೌಂಟೆಂಟ್ಸ್‌ನ್ನು ಇಟ್ಟು ಫ್ರೀ ಆಂಡ್ ಕನ್‌ಕರೆಂಟ್ ಆಡಿಟನ್ನು ದಿವಸವೂ ಮಾಡಿಸುತ್ತಿದ್ದೇವೆ, ಇದಕ್ಕಾಗಿ ತಾವು ನಮ್ಮನ್ನು ಶ್ಲಾಘಿಸಬೇಕಾಗಿತ್ತು. ಈ ವರ್ಗಾವಣೆಗೂ ತಮಗೂ ಅಧಿಕಾರ ಇಲ್ಲ. ದಯವಿಟ್ಟು ಸರ್ಕಾರ ಹೊರಡಿಸಿದಂಥ ಆದೇಶವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಸದಸ್ಯರು ನನ್ನ ಹತ್ತಿರ ಮಾತನಾಡಲಿ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.— ಆದರ ಬಗ್ಗೆ ಸಭೆಯಲ್ಲೇ ಹೇಳಲಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.— ಆಲ್ಲಿಯವರೆಗೆ ಮಾಡಿರುವ ಆರ್ಡರನ್ನು ಅಬೇಯನ್ಸ್ ಮಾಡಲಿ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.— ಇದು ನಿಮ್ಮ ಹಸ್ತಕ್ಷೇಪ ಆಲ್ಲವೇ ? ನಿಮ್ಮದು ಇದೇ ಪ್ರವೃತ್ತಿಯಾದರೆ ಈ ರೀತಿ ಸರ್ವಾಧಿಕಾರ ಪ್ರವೃತ್ತಿಯನ್ನು ಮಾಡಿ ನೀವು ಸ್ವಾಯತ್ತ ಸಂಸ್ಥೆಗಳನ್ನು ಸಹಕಾರೀ ಕ್ಷೇತ್ರದಲ್ಲಿ ನೀವು ಪ್ರವೇಶ ಮಾಡುವುದಾದರೆ ಇದನ್ನು ಸಹಿಸಿಕೊಂಡಿರುವುದಕ್ಕೆ ಆಗುವುದಿಲ್ಲ. This is intolerable ದಯವಿಟ್ಟು ನೋಡಿ ಏನಾಗಿದೆ ಎಂದು. ಗೊತ್ತಿಲ್ಲದೇ ಕುಳಿತುಕೊಂಡು ಓಹೋ ಎಂದು ಹೇಳಬೇಡಿ.

(ಗೊಂದಲ)

ಶ್ರೀ ಬಿ. ಬಸಪಲಿಂಗಪ್ಪ.— ನಿಮ್ಮನ್ನು ಆರು ವರ್ಷದಿಂದ ನೋಡಿದ್ದೇವೆ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ.—ನಾವು ಜನತಂತ್ರ ವಿರೋಧಿ ಕೆಲಸವನ್ನೇನೂ ಮಾಡಿಲ್ಲ. ಈ ರೀತಿ ಮಂತ್ರಿಗಳಿಗೆ ಅಧಿಕಾರ ಇಲ್ಲ. ಈ ಅಧಿಕಾರದ ದುರುಪಯೋಗವನ್ನು ನಾವು ಪ್ರತಿಭಟಿಸಿ ಇವತ್ತು ಸದನದಿಂದ ಹೊರಗೆ ಹೋಗುತ್ತಿದ್ದೇವೆ.

(ಈ ಹಂತದಲ್ಲಿ ಜನತಾ ದಳದ ಸದಸ್ಯರುಗಳು ಜನತಾ ಮತ್ತು ಬಿ.ಜೆ.ಪಿ. ಸದಸ್ಯರುಗಳು ಸಭೆಯಿಂದ ಎದ್ದು ಹೊರಗೆ ಹೋದರು)

ಶ್ರೀ ಆರ್. ಎಲ್. ಜಾಲಪ್ಪ.— ಒಳ್ಳೆಯ ಕೆಲಸವನ್ನು ಮಾಡಿ ಒಳ್ಳೆಯ ಹೆಸರನ್ನು ತೆಗೆದು ಕೊಳ್ಳಿ ಸ್ವಾಮಿ.

(ಗೊಂದಲ)

ವೈಸ್ ಛೇರ್ಮನ್.— ಈಗ ಮುಂದಿನ ಭಾಷಣಕಾರರು ಶ್ರೀ ಮಲ್ಲಿಕಾರ್ಜುನ ಖರ್ಗೆಯವರು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಒಬ್ಬ ಆಫೀಸರ್ಸ್‌ಗೋಸ್ಕರವಾಗಿ ನೀವುಗಳು ಈ ರೀತಿ ಮಾಡಬಾರದು.

(ಗೊಂದಲ)

## ಗಮನ ಸೆಳೆಯುವ ಸೂಚನೆಗಳು

### ೨. ಗುರುಮಿಟ್ಕಲ್ ಪಟ್ಟಣದಲ್ಲಿ ಕುಡಿಯುವ ನೀರಿನ ಅಭಾವ

SRI M. MALLIKARJUNA KHARGE.—Sir, I call the attention of the Hon.ble Minister for Ports, Fisheries, Housing and Urban Development regarding the scarcity of drinking water supply to the Gurumitkal Town in Yadagiri Taluk.

SRI T. N. NARASIMHA MURTHY.— Sir, on behalf of the Government, I make the following statement.

The population of the Town as per 1981 Census is 11616. Present population is about 14000. The prospective Population is estimated during 2011 will be 22500.